ಹೋಳು, ಅಡಿಕೆಪುಡಿ, ಸುಣ್ಣ, ಕರಿ ಎಲೆ, ಬಿಳಿ ಎಲೆ, ಚಮನ್ ಹೀಗೆ ಸರಂಜಾಮವೇ ಇರುತ್ತಿತ್ತು. ಸಂತೆಯ ದಿನ ತನಗೆ ಬರಲು ಆಗಲಿಲ್ಲವೆಂದರೆ ಆ ವಾರ ಬೇರೆ ಯಾವುದಾದರೂ ದಿನ ಬಂದು ತನ್ನ ಗಾಡಿಯ ಮೇಲೆ ಊರಿನ ಓಣಿಗಳಲ್ಲಿ ಸುತ್ತು ಹಾಕುತ್ತಿದ್ದ. ಅವನ ಗಾಡಿಯ ಸದ್ದೇ ಅವನು ಬಂದಿದ್ದನ್ನು ಸಾರುವ ಡಂಗುರವಿದ್ದಂತೆ. ಊರಿನಲ್ಲಿ ಬಹುತೇಕ ಜನ ಎಲೆಯಡಿಕೆ ಮೆಲ್ಲುವ ಹವ್ಯಾಸ ಹೊಂದಿದ್ದರಿಂದ ಅಡಿಕೆಪ್ಪ ಬರದೇ ಹೋದರೆ ಊರು ರಸಾಸ್ವಾದವಿಲ್ಲದೇ ಒಣಗಿದಂತಾಗುತ್ತಿತ್ತು.

ಮಸಾಲೆ ಪದಾರ್ಥಗಳನ್ನು ಮಾರುವ ಖಾಸೀಮನ ಅಂಗಡಿ ಘಮಘಮಿಸುವ ಅಂಗಡಿ. ಮೆಣಸಿನಕಾಳು, ಮರಾಠಿ ಮೊಗ್ಗು, ಏಲಕ್ಕಿ, ಲವಂಗ, ಲವಂಗದ ಎಲೆ, ಪಚ್ಚ ಕರ್ಪೂರ, ಆಮಚೂರ, ಚಕ್ಕೆ, ಹವೀಜ, ಮೆಂತ್ಯ, ಒಣ ಮೆಣಸಿನಕಾಯಿ, ಸಾಸಿವೆ, ಜೀರಿಗೆ, ಕರಿ ಜೀರಿಗೆ, ಅರಿಶಿನ, ಇಂಗು, ಅಮಸೋಲು, ಗಸಗಸೆ, ಕರಿ ಎಳ್ಳು, ಬಿಳಿ ಎಳ್ಳು, ಅರಿಶಿನದ ಕೊಂಬುಗಳು, ಕಾಳುಮೆಣಸು, ಇನ್ನೂ ಅನೇಕ ಹೆಸರೇ ಗೊತ್ತಿರದ, ಯಾರೂ ಬಳಸದಂತಹ ವಿಧ ವಿಧದ ಮಸಾಲೆ ಪದಾರ್ಥಗಳನ್ನು ಸಣ್ಣ ಗೋಣಿ ಚೀಲಗಳಲ್ಲಿ ತುಂಬಿಸಿ, ಜನರಿಗೆ ಕೊಡುವಾಗ ತೂಕ ಮಾಡಲು ಅನುಕೂಲವಾಗಲೆಂದು ಚೀಲಗಳ ಬಾಯಿಯನ್ನು ಸುರುಳಿಯಾಗಿ ಸುತ್ತಿ ಮಧ್ಯ ಸಣ್ಣ ಅಳತೆಯ ಪಾವುಗಳನ್ನು ಹಾಕಿಟ್ಟರೆ ನೋಡಲು ಕಣ್ಣಿಗೆ ಆನಂದ, ಮೂಗಿಗೆ ಹಬ್ಬ! ವಾಸನೆಗಾಗಿ ಬೇಕಂತಲೇ ಇವನ ಮುಂದೆ ಜನ ಸುಳಿದಾಡುತ್ತಿದ್ದರಾದರೂ ಖಾಸೀಮನದು ಯಾರ ಜೊತೆಯೂ ಹೆಚ್ಚಿನ ಮಾತುಕತೆಯಿಲ್ಲ. ಸಣ್ಣ ಪ್ಲಾಸ್ಟಿಕ್ ಚೀಲಗಳಲ್ಲಿ ಹತ್ತು ಗ್ರಾಮ್, ಇಪ್ಪತ್ತು ಗ್ರಾಮ್ ಮಸಾಲೆ ಪದಾರ್ಥಗಳನ್ನು ತೂಕ ಮಾಡಿ, ಕಟ್ಟಿ ಕೊಟ್ಟು ಚಿಲ್ಲರೆ ಹಿಂದಿರುಗಿಸಿದರೆ ಮುಗಿಯಿತು ಅವನ ಜೊತೆಗಿನ ವ್ಯವಹಾರ. ಇತರೆ ವ್ಯಾಪಾರಿಗಳಂತೆ ಗ್ರಾಹಕರನ್ನು ಓಲೈಸುತ್ತಿರಲಿಲ್ಲ. ಆತನ ಬಳಿ ಚೌಕಾಶಿಗೂ ಅವಕಾಶವಿಲ್ಲ. ಊರಿನ ಬಹುತೇಕರಿಗೆ ಇದು ಗೊತ್ತಿದ್ದರಿಂದ ಹೆಚ್ಚಿನ ಮಾತನಾಡದೆ ತಮಗೆ ಬೇಕಾದುದನ್ನು ಕಟ್ಟಿಸಿಕೊಂಡು ದುಡ್ಡು ಕೊಟ್ಟು ಹೋಗುತ್ತಿದ್ದರು.

ಖಾಸೀಮನ ಎದುರು ಕುಳಿತುಕೊಳ್ಳುತ್ತಿದ್ದಳು ಹೂ ಮಾರುವ ಕಾಶವ್ವ. ಮಲ್ಲಿಗೆಯ ಮಾಲೆ, ಮೊಗ್ಗುಗಳು, ಸಂಪಿಗೆಯ ಬಿಡಿ ಹೂವುಗಳು, ಬಣ್ಣ ಬಣ್ಣದ ಗುಲಾಬಿ ಹೂವುಗಳು ಕಾಶವ್ವನ ಬುಟ್ಟಿಯಲ್ಲಿ. ಖಾಸೀಮನ ಮಸಾಲೆ ಪದಾರ್ಥಗಳು ಸಹ ಮಂಕಾಗುತ್ತಿದ್ದವು ಅವಳ ಹೂವುಗಳ ಪರಿಮಳದ ಮುಂದೆ. ಹಲವರ ಮನೆಯ ಹಿತ್ತಲಲ್ಲಿ ದಾಸವಾಳ, ಆಬಾಲಿ, ಮಲ್ಲಿಗೆ, ನಂದಬಟ್ಟಲು ಹೂವುಗಳೆಲ್ಲ ಬೆಳೆಯುತ್ತಿದ್ದರಿಂದ ಕಾಶವ್ವನ ಬಳಿ ವ್ಯವಹರಿಸುವವರು ಕಡಿಮೆ. ಹಾಗಾಗಿ ಶ್ರಾವಣ ಮಾಸದಲ್ಲಿ ಹೆಚ್ಚಾಗಿ ಕಾಶವ್ವಳನ್ನು ಸಂತೆಯಲ್ಲಿ ಕಾಣಬಹುದಿತ್ತು. ನನಗೆ ಇವರೆಲ್ಲರ ಹೆಸರು ಇಷ್ಟು ಪರಿಚಿತವಾಗಿದ್ದು ನಮ್ಮಜ್ಜನಿಂದ. ಯಾರೊಟ್ಟಿಗೆ ವ್ಯವಹಾರ ಮಾಡಬೇಕಾದರೂ ಅವರ ಹೆಸರು, ಊರು, ಮನೆಯಲ್ಲಿ ಮಕ್ಕಳು, ಅದೇ ಹಳ್ಳಿಯವರಾದರೆ ಅವರ ಓಣಿಯ ವಿವರಗಳನ್ನೆಲ್ಲ ಕೇಳದೇ ಮುಂದಕ್ಕೆ ಹೋಗುತ್ತಿರಲಿಲ್ಲ. ಅವನ ಹಿಂದೆ ಚೀಲಗಳನ್ನು ಒಂದು ಕೈಯಿಂದ ಮತ್ತೊಂದು ಕೈಗೆ ವರ್ಗಾಯಿಸುತ್ತ ಯಾವಾಗ ಮಾತು ಮುಗಿಸುತ್ತಾನೋ ಮಾರಾಯ ಎಂದು ಕಾಯುತ್ತ ನಿಲ್ಲುವುದು ಶಿಕ್ಷೆ ಎನ್ನಿಸುತ್ತಿತ್ತು. ಮುಂದೆ ಅವನು ಬೆಂಗಳೂರಿಗೆ ಬರಬೇಕಾದಾಗ ಅಕ್ಕಪಕ್ಕದವರೊಡನೆ ಹೀಗೆ ಹಿತಾರ್ ಪಿತಾರ್ ತೆಗೆದು ನಿಲ್ಲಬೇಡ ಎಂದು ಕರಾರು ಮಾಡಿದ್ದೆವು. ಯಾಕೆಂದರೆ ಈಗ ಪರ್ಸನಲ್ ಸ್ಪೇಸ್ ಎಂಬುದು ಮುಖ್ಯವಾಗಿರುವುದರಿಂದ ಯಾರೂ ತಮ್ಮ ವೈಯಕ್ತಿಕ ವಿವರಗಳನ್ನು ಕೇಳಲು ಹೇಳಲು ಇಷ್ಟಪಡುವುದಿಲ್ಲ. ಅದೇ ಸೋಷಿಯಲ್ ಮೀಡಿಯಾದಲ್ಲಿ ರೀಲ್ಸ್ ಹಾಕಿ ತಮ್ಮ ಬವಣೆಗಳನ್ನೆಲ್ಲ ತೋಡಿಕೊಳ್ಳುತ್ತಾರಾದರೂ, ಯಾರಾದರು ಎದುರಾಗಿ ತುಸು ಹೆಚ್ಚಿನ ವಿವರಗಳನ್ನು ಕೇಳಿದರೆ ಅನುಮಾನಪಡುವಂತಹ ಪರಿಸ್ಥಿತಿ ಹುಟ್ಟಿಕೊಂಡಿದೆ.

ತರಕಾರಿ ಮಾರುವವರೇ ಹೆಚ್ಚಿರುತ್ತಿದ್ದರು ಅಜ್ಜನೂರಿನ ಸಂತೆಯಲ್ಲಿ. ತಮ್ಮದೇ ತೋಟದಲ್ಲಿ ತರಕಾರಿ ಬೆಳೆದ ಜನ ಅಷ್ಟೋ ಇಷ್ಟೋ ಸಿಗುತ್ತದೆಂದು ಬರುತ್ತಿದ್ದರಾದ್ದರಿಂದ ಅಲ್ಲಲ್ಲಿ ಸಣ್ಣ ಸಣ್ಣ ಬುಟ್ಟಿಗಳು, ಸಣ್ಣದಾಗಿ ಗುಡ್ಡೆ ಹಾಕಿದ ತರಕಾರಿಗಳ ಗುಂಪು ಹೆಚ್ಚಾಗಿ ಕಣ್ಣಿಗೆ ಕಾಣಿಸುತ್ತಿತ್ತು. ಇಡೀ ಸಂತೆ ಸುತ್ತು ಹಾಕಿದರೆ ಎಳೆ ಎಳೆಯಾಗಿರುತ್ತಿದ್ದ ಸವತೆ, ಬದನೆ, ಬೆಂಡೆ, ಅವರೆ, ಹೀರೇಕಾಯಿ, ನುಗ್ಗೆಕಾಯಿ, ಮೆಂತ್ಯ ಸೊಪ್ಪು, ರಾಜಗಿರಿ, ಹಕ್ಕರಕಿ, ಹರವಿ, ಪುಂಡಿ, ಕೊತ್ತಂಬರಿ, ಕರಿಬೇವು — ಹೀಗೆ ಹಲವು ಬಣ್ಣಗಳಲ್ಲಿ, ಆಕಾರಗಳಲ್ಲಿರುತ್ತಿದ್ದ ಹಸಿರು ಸಂಪತ್ತು. ನೋಡಿದರೆ ಕೂಡಲೇ ಮನೆಗೆ ತೆಗೆದುಕೊಂಡು ಹೋಗಿ, ಸ್ವಚ್ಛವಾಗಿ ತೊಳೆದು ಮೆಂತ್ಯ ಪಚಡಿಯನ್ನೋ, ಪುಂಡಿ ಪಲ್ಯವನ್ನೋ ಮಾಡಿ ಬಿಸಿ ರೊಟ್ಟಿಯೊಂದಿಗೆ ಸವಿಯಬೇಕು ಎನ್ನಿಸುತ್ತಿತ್ತು. ಹಾಗೆಯೇ ಮುಂದೆ ಹೋದರೆ ತಿರುವಿನಲ್ಲಿ ಕುಳಿತಿರುತ್ತಿದ್ದ ರೇಷನ್ ರಾಮು. ಇವನ ಬಳಿ ಅಕ್ಕಿ, ಗೋಧಿ, ಜೋಳ, ರಾಗಿ, ನವಣೆ, ಸಜ್ಜೆ, ಬೇಳೆ ಇತ್ಯಾದಿ ಧಾನ್ಯಗಳು ಸಿಗುತ್ತಿದ್ದವು. ಸರಕಾರ ಕೊಡುತ್ತಿದ್ದ ರೇಷನ್ ಅಕ್ಕಿಯನ್ನು ಇವನಿಗೆ ಮಾರಲು ಕೆಲವು ಜನ ಬರುತ್ತಿದ್ದರು. ಹೀಗಾಗಿ ಅವನಿಗೆ ರೇಷನ್ ರಾಮು ಎಂಬ ನಾಮಧೇಯ. ಇವರ ಬಳಿ ಕೊಂಡ ಅಕ್ಕಿಯನ್ನು ದೋಸೆ ಅಕ್ಕಿ ಎಂಬ ಹೆಸರು ಕೊಟ್ಟು ಬೇರೆ ಊರಿನಲ್ಲಿ ಮಾರುತ್ತಿದ್ದ. ಊರಿನ ಶ್ರೀಮಂತರು ಇವನ ಬಳಿ ಸಿಗುತ್ತಿದ್ದ ಪಾಲಿಷ್ ಮಾಡಿದ ಬೆಳ್ಳಗಿನ ಅಕ್ಕಿಯನ್ನು ಕೊಂಡುಕೊಳ್ಳುತ್ತಿದ್ದರು. ನವಣೆ ಅಕ್ಕಿ, ಕೆಂಪು ಅಕ್ಕಿ, ಸಜ್ಜೆ ಹೀಗೆ ಎಲ್ಲಾ ವಿಧದ ಜನರಿಗೆ ಬೇಕಾದ ಸರಂಜಾಮು ಇರುತ್ತಿತ್ತು ಇವನ ಬಳಿ. ಅದೂ ಅಲ್ಲದೆ ಎಲ್ಲರಿಗೂ ಬೇಕಾದ ಬಿಜಾಪುರ ಜೋಳ ಸಿಗುತ್ತಿದ್ದರಿಂದ ಸಂತೆಗೆ ಬಂದರೆ ರೇಷನ್ ರಾಮನ ಬಳಿ ಹೋಗಲೇಬೇಕಿತ್ತು.

ಈ ತಿರುವಿನಲ್ಲಿರುವ ದೊಡ್ಡದಾದ ಹನುಮಂತನ ದೇವಸ್ಥಾನ ಸಂತೆಯ ಸಮಯದಲ್ಲಿ ಜನರಿಂದ ತುಂಬಿರುತ್ತಿತ್ತು. ಪ್ರಾಂಗಣದಲ್ಲಿ ಕುಳಿತರೆ ಇಡೀ ಸಂತೆಯನ್ನು ನೋಡಬಹುದಾಗಿತ್ತು. ಈ ಹನುಮಂತ ಬಹಳ ಜಾಗೃತನೆಂದು ಊರಲ್ಲೆಲ್ಲ ಪ್ರತೀತಿ. ಶನಿವಾರ ಒಂದು ಮುಷ್ಟಿ ಉಪ್ಪು, ಇಪ್ಪತ್ತೊಂದು ಎಕ್ಕದ ಎಲೆಗಳ ಮೇಲೆ ಶ್ರೀರಾಮ ಎಂದು ಬರೆದು ಮಾಲೆ ಮಾಡಿ ದೇವಸ್ಥಾನದ ಪುಟ್ಟ ಗರ್ಭ ಗುಡಿಯಲ್ಲಿರುವ ಕಲ್ಲಿನ ಮೂರ್ತಿ ಹನುಮಂತನಿಗೆ ಹಾಕಿ, ಆ ಸಣ್ಣದಾದ ಗರ್ಭಗುಡಿಯೊಳಗೆ ತಲೆ, ಮೈ ಬಗ್ಗಿಸಿಕೊಂಡು ಹನುಮಂತನ ಸುತ್ತ ಪ್ರದಕ್ಷಿಣೆ ಹಾಕಿದರೆ ಬೇಡಿದ್ದು ಈಡೇರುತ್ತದೆ ಎಂದು ಜನ ನಂಬುತ್ತಿದ್ದರು. ನಮ್ಮಮ್ಮನು ನನ್ನನ್ನು ಎಕ್ಕದ ಎಲೆಗಳನ್ನು ಕಿತ್ತು ತರಲು ಕಳಿಸಿ, ಹಾಲು ಸೋರುತ್ತಿದ್ದ ಅವುಗಳನ್ನು ಸ್ವಚ್ಛ ಮಾಡಿ ಅವುಗಳ ಮೇಲೆ ರಾಮನಾಮ ಬರೆದು ಹನುಮಂತನಿಗೆ ಇಪ್ಪತ್ತೊಂದು ವಾರಗಳ ಕಾಲ ಮಾಲೆ ಹಾಕುತ್ತಿದ್ದುದು ನನಗೆ ನೆನಪಿದೆ.

ರೇಷನ್ ರಾಮನ ಎದುರಿಗೆ ಚಿಮಣಿ ಎಣ್ಣೆಯ ಸ್ಟೋವಿನ ಮೇಲೆ ಕರ್ರಗಿನ ದೊಡ್ಡ ಬಾಣಲೆಯಿಟ್ಟುಕೊಂಡು ಬಿಸಿ ಬಿಸಿ ಭಜಿಗಳನ್ನು ಕರೆಯುತ್ತಿದ್ದ ತೂಕವ್ವ. ಸ್ಟೋವಿನ ಎತ್ತರಕ್ಕೆ ಸರಿಯಾದ ಮರದ ಸ್ಟೂಲನ್ನು ಹಾಕಿಕೊಂಡು ಅದರ ಮೇಲೆ ಮೊಣಕಾಲಿನವರೆಗೂ ಬರುವಂತೆ ಸೀರೆಯನ್ನು ಏರಿಸಿಕೊಂಡು ಕಾಲಲ್ಲಿದ್ದ ದಪ್ಪ ಗೆಜ್ಜೆಯನ್ನು ಪ್ರದರ್ಶಿಸುತ್ತಾ ಕರಿದ ಹೊಗೆಗೆ ಮುಖದ ತುಂಬಾ ಇಳಿಯುತ್ತಿದ್ದ ಬೆವರನ್ನು ಆಗಾಗ ಸೆರಗಿನಿಂದ ಒರೆಸಿಕೊಳ್ಳುತ್ತ ಕುಳಿತಿರುತ್ತಿದ್ದ ತೂಕವ್ವ ಬಾಯಿಯಲ್ಲಿ ಬಲು ಜೋರು. ಬುಟ್ಟಿಯಲ್ಲಿ ಕರಿದಿಟ್ಟ ಬಜ್ಜಿಗಳನ್ನು ತೆಗೆದುಕೊಳ್ಳಲು ಆಗಾಗ ಸಂದಿಯಿಂದ ಕೈಗಳು ತೂರಿ ಬಂದಾಗ ತನ್ನ ಬಳಿ ಇಟ್ಟುಕೊಂಡಿದ್ದ ಬಿದಿರಿನ ಕಟ್ಟಿಗೆಯಿಂದ ಸಟ್ ಸಟ್ ಎಂದು ಬೀಸುತ್ತಿದ್ದಳು. ಜೊತೆಗೆ ಒಂದೇ ಸಮನೆ ಬರುತ್ತಿದ್ದ ಬೈಗುಳಗಳ ಸುರಿಮಳೆ. ಈಗಷ್ಟೇ ಬಿಸಿ ಎಣ್ಣೆಯಲ್ಲಿ ಕರಿದು ಹಳೆಯ ದಿನಪತ್ರಿಕೆಯಲ್ಲಿ ಗರಿಗರಿಯಾಗಿ ಕುಳಿತಿರುತ್ತಿದ್ದ ಈರುಳ್ಳಿ ಭಜಿ, ಮೆಣಸಿನಕಾಯಿ ಭಜಿ, ಪಡವಲಕಾಯಿ ಭಜಿ, ಜೊತೆಗೆ ಚುರುಮುರಿ, ಎಣ್ಣೆಯಲ್ಲಿ ಕರಿದ ಮೆಣಸಿನಕಾಯಿಗೆ ಭಾರಿ ಬೇಡಿಕೆ. ಕೆಲವರು ಅಲ್ಲಿಯೇ ಬಿಸಿ ಬಿಸಿ ಮಾಡಿಸಿಕೊಂಡು ತಿಂದರೆ ಇನ್ನೂ ಕೆಲವರು ಮನೆಯವರಿಗೆಂದು ಕಟ್ಟಿಸಿಕೊಂಡು ಹೋಗುತ್ತಿದ್ದರು.

ಇದಿಷ್ಟು ಸಂತೆಯ ಮೊದಲ ಬೀದಿಯ ಕತೆ. ಇದನ್ನು ದಾಟಿಕೊಂಡು ರೇಷನ್ ರಾಮು ಕುಳಿತಿರುತ್ತಿದ್ದ ತಿರುವಿನಲ್ಲಿ ಹೊರಳಿದರೆ ಮೊದಲು ಕಾಣಿಸುತ್ತಿದ್ದುದೇ ದೇವರ ಪೂಜೆಯ ಪರಿಕರಗಳು. ಅರಿಶಿನ, ಕುಂಕುಮ, ಭಂಡಾರ, ಊದಿನಕಡ್ಡಿ, ಕರ್ಪೂರ ಮುಂತಾದವುಗಳ ಬಣ್ಣ ಬಣ್ಣದ ನೋಟ. ಅದರ ಪಕ್ಕ ಸ್ಟೀಲ್ ಪಾತ್ರೆಗಳ ರಾಶಿ. ಸಣ್ಣ ಪುಟ್ಟ ಪಾತ್ರೆಗಳು, ಲೋಟ, ಬಟ್ಟಲು, ತಟ್ಟೆ, ಚಮಚಗಳು ನೋಡುವವರ ಕಣ್ಣು ಕುಕ್ಕುತ್ತಾ ಝುಳಪಿಸುತ್ತಿದ್ದವು. ಅದರ ಎದುರಿಗೆ ಬಳೆಯಂಗಡಿ. ಅದರಲ್ಲೇ ಹೆಣ್ಣುಮಕ್ಕಳ ಅಲಂಕಾರಕ್ಕೆ ಬೇಕಾದ ಎಲ್ಲ ತರಹದ ವಸ್ತುಗಳು ಸಿಗುತ್ತಿದ್ದರಿಂದ ಈ ಅಂಗಡಿಯ ಮೇಲೆ ಹುಡುಗಿಯರಿಗೆ ಕಣ್ಣಿದ್ದರೆ, ಹುಡುಗರಿಗೆ ಅಲ್ಲಿಗೆ ಹೋಗುತ್ತಿದ್ದ ಹುಡುಗಿಯರ ಮೇಲೆ ಕಣ್ಣು. ಸಂತೆಯ ಸಮಯ ಬಿಟ್ಟು ಯಾರಿಗಾದರೂ ಬಳೆ ಇಡಿಸಿಕೊಳ್ಳಬೇಕಾದಲ್ಲಿ